**ದಿನಾಂಕಃ 25.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ. ಎಂ.ಸಿ.ಜಿ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

1. ವಿಚಾರಣಾಧಿಕಾರಿ CTS ಸಂಕೇಶ್ವರ ರವರು ನೀಡಿದ್ದಾರೆ ಎನ್ನಲಾದ ಮೂರು ನೋಟೀಸಗಳನ್ನು ಈಗ ಒಟ್ಟಾರೆಯಾಗಿ ನಿಡಿಃ 96 ಎಂದು ಗುರುತಿಸಲಾಯಿತು.
2. ಭೀಮವ್ವಾ ಬೋವಿ ರವರ ಮರಣ ಪ್ರಮಾಣ ಪತ್ರವನ್ನು ನಿಡಿಃ 97 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಮೇಲ್ಮನವಿದಾರ ಪರ ಶ್ರೀ. ಎಲ್.ಎಸ್.ಕೆ. ವಕೀಲರಿಂದಃ**

1. ನಿಡಿಃ 96 ಮಂಜೂರು ಮಾಡಿದ ಆದೇಶ ಪ್ರತಿಗಳು ಅಲ್ಲ ಎನ್ನುವುದು ಸರಿಯಲ್ಲ. ನಿಡಿಃ 96 ರಲ್ಲಿ ಅದನ್ನು ನೀಡಿದ ವರ್ಷ, ತಿಂಗಳು, ದಿನಾಂಕ ಇಲ್ಲ ಎನ್ನುವುದು ಸರಿಯಲ್ಲ. ಅದರಲ್ಲಿ ಅದನ್ನು ನೀಡಿದ ವರ್ಷ, ತಿಂಗಳು, ದಿನಾಂಕ ಖಾಲಿ ಇದ್ದರೂ ಸಹಿತ ಅದರಲ್ಲಿ ನಮೂದು ಇದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ನಿಡಿಃ 96 ಅದರಲ್ಲಿ ನಮೂದಿಸಿದ ಸ್ವತ್ತುಗಳ ಕರ ನಿರ್ಧರಣಕ್ಕಾಗಿ ಚೌಕಾಸಿ ಮಾಡಲು ನೀಡಿದ ನೋಟೀಸ್ ಎನ್ನುವುದು ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಹೆಸರಿಗೆ ವರ್ಗಾವಣೆಯಾಗುವ ಮುನ್ನ ನನ್ನ ತಾತ ಶೆಟ್ಟೆಪ್ಪಾ ಸತ್ಯಪ್ಪಾ ಭೋವಿ ರವರ ಹೆಸರಿನಲ್ಲಿದ್ದವು ಎನ್ನುವುದು ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ನಿಪಿಃ 37, 38 ರಲ್ಲಿ CTS ಸ್ವತ್ತಿನ ಸಂಖ್ಯೆ 2740 ಮತ್ತು 2739 ರಲ್ಲಿ ನನ್ನ ತಾತನ ಹೆಸರನ್ನು ಕಡಿಮೆ ಮಾಡಿ ನನ್ನ ತಂದೆಯ ಹೆಸರನ್ನು ಹಚ್ಚಿದ್ದಾರೆ ಎನ್ನುವುದು ಸರಿ. ಸಾಕ್ಷಿ ಹೇಳುತ್ತಾರೆ ನಿಪಿಃ 37 ಮತ್ತು 38 ಸೃಷ್ಟಿಸಿದ ದಾಖಲೆಗಳು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಮೂಲತಃ ನನ್ನ ತಾತನಿಂದ ನನ್ನ ತಂದೆಗೆ ಬಂದ ಪಿತ್ರಾರ್ಜಿತ ಸ್ವತ್ತುಗಳು ಎಂದು ನನಗೆ ಗೊತ್ತಿದ್ದರೂ ಸಹಿತ ಇಲ್ಲ ಎಂದು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದು ಸೂಚಿಸುವುದು ಸರಿಯಲ್ಲ. ನಿಡಿಃ 97 ಈ ಪ್ರಕರಣದ ಅಪೀಲುದಾರರ ತಾಯಿಯ ಮರಣ ಪ್ರಮಾಣ ಪತ್ರ ಅಲ್ಲ ಎನ್ನುವುದು ಸರಿಯಲ್ಲ.

ಆರ್.ಎ.ನಂ.67/2008

ಆರ್. ಡಬ್ಲೂಃ 1

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.